# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
## ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
### ವಾರ್ಡ್ ಸಮಿತಿ ಸಭೆ, ದಿನಾಂಕ: 24-12-2021 ರ ಸಭಾ ನಡುವಳಿ

**ದಿನಾಂಕ: 24-12-2021 ರಂದು ಬೆಳ್ಳಿಗೆ 11.00 ಗಂಟೆಗೆ** ವಾರ್ಡ್ ನಂ.06 ಥಣಿಸಂದ್ರ ವಾರ್ಡ್ ಸಮಿತಿಯ ಸಭೆಯನ್ನು **ಶ್ರೀ ಬಿ. ರೆಡ್ಡಿಶಂಕರ್ ಬಾಬು, ವಿಶೇಷ ಆಯುಕ್ತರು, (ಆಸ್ತಿಗಳು) ರವರ ಹಾಗೂ** ನೋಡಲ್ ಅಧಿಕಾರಿಗಳು ಅಧ್ಯಕ್ಷತೆಯಲ್ಲಿ ರವರ ಅಧ್ಯಕ್ಷತೆಯಲ್ಲಿ ಹೆಗಡೆನಗರ 2ನೇ ಮುಖ್ಯರಸ್ತೆ 4ನೇ ಅಡ್ಡ ರಸ್ತೆಯಲ್ಲಿ ವಿರುವ ಸಮುದಾಯ ಭವನದಲ್ಲಿ ನೆಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವಅಧಿಕಾರಿಗಳು | ಹುದ್ದೆ |
|---|---|---|
| 1 | **ಶ್ರೀ ಬಿ. ರೆಡ್ಡಿಶಂಕರ್ ಬಾಬು,** | **ವಿಶೇಷ ಆಯುಕ್ತರು, (ಆಸ್ತಿಗಳು) ಹಾಗೂ** ನೋಡಲ್ ಅಧಿಕಾರಿಗಳು ವಾರ್ಡ್ ನಂ 06(ಥಣಿಸಂದ್ರ) |
| 2 | ಶ್ರೀ ಸುರೇಶ ದೇವತರಾಜ್ | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ, ವಾರ್ಡ್ ಸಮಿತಿ, ವಾರ್ಡ್ ನಂ 06(ಥಣಿಸಂದ್ರ) |
| 3 | ಶ್ರೀಮತಿ ಡಾ॥ ಅಲೀನಾ | ಆರೋಗ್ಯ ವೈಧ್ಯಾಧಿಕಾರಿಗಳು, ಪ್ರಾಥಮಿಕ್ ಆರೋಗ್ಯ ಕೇಂದ್ರ, ಥಣಿಸಂದ್ರ |
| 4 | ಬೆಟ್ಟಸ್ವಾಮಿ ಎಸ್.ಜಿ | ಸ.ಕಾ.ಅ ರಸ್ತೆ ಮತ್ತು ಮೂಲಭೂತ ಸೌಕರ್ಯ ಬಿಬಿಎಂಪಿ |
| 5 | ಕಿರಣ್ ಬಿ | ಸ.ಕಾ.ಅ , ಯೋಜನಾ ವಿಭಾಗ ಬಿಬಿಎಂಪಿ ಯಲಹಂಕ ವಲಯ |
| 6 | ಚಂದನ್ ಎಸ್. | ಸ.ಕಾ.ಅ, ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆ |
| 7 | ಲಿಂಗರಾಜು | ಎ.ಎಸ್.ಐ ಅಮೃತ್ತಹಳ್ಳಿ ಪೋ.ಠಾ |
| 8 | ಹನುಮಂತಪ್ಪ ಪಾಟೀಲ್ | ಆರ್.ಎಫ್.ಓ ಯಲಹಂಕ ವಲಯ |
| 9 | ದೇವರಾಜ್ | ಸ.ಅ (ಪಿ.ಸಿ-1) |
| 10 | ವರುಣ್ ಕುಮಾರ್ | ಸ.ಅ, ರಸ್ತೆ ಮತ್ತು ಮೂ.ಭೂ.ಸೌಕರ್ಯ ಯಲಹಂಕ ವಲಯ |
| 11 | ಮುತ್ತುರಾಜ್ | ಉಪ ಆರ್.ಎಫ್.ಓ ಯಲಹಂಕ ವಲಯ |
| 12 | ಶಿವಶಂಕರ್ | ಕಲ್ಯಾಣ ಇಲಾಖೆ, ಯಲಹಂಕ ವಲಯ |
| 13 | ಬಸವರಾಜಪ್ಪ ಆರ್.ಎಸ್ | ಕಾಮಗಾರಿ ಪರಿವೀಕ್ಷಕರು, ಬಿ.ಡಬ್ಲೂ.ಎಸ್.ಎಸ್.ಬಿ |
| 14 | ಶ್ರೀ ಮಂಜುನಾಥ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 06 (ಥಣಿಸಂದ್ರ) |
| 15 | ಶ್ರೀ ಮಹೇಶ್ ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 06 (ಥಣಿಸಂದ್ರ) |

**ಶ್ರೀ ಸುರೇಶ ದೇವತರಾಜ್** ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ 06 ರವರು ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯದ ಬಗ್ಗೆ ತಿಳಿಸಿದರು.

1. **ಕೋವಿಡ್ –19 ಸೊಂಕು ಹರಡವುದನ್ನು ತಡೆಗಟ್ಟುವ ಬಗ್ಗೆ.**

- ಶ್ರೀಮತಿ ಡಾ॥ ಅಲೀನಾ ಆರೋಗ್ಯ ವ್ಯಧ್ಯಾಧಿಕಾರಿಗಳು, ಹೆಗಡೆನಗರ ಪ್ರಾಥಮಿಕ ಆರೋಗ್ಯ ಕೇಂದ್ರರವರು ಮಾತನಾಡಿ ಕೊರೊನಾ 3ನೇ ಅಲೇ ಭೀತಿವಿರುವುದರಿಂದ ಸಾರ್ವಜನಿಕರು ಕಡ್ಡಾಯವಾಗಿ ಮಾಸ್ಕ ಧರಿಸಬೇಕು, ಜನ ದಟ್ಟಣೆಜಾಗಗಳಿಗೆ ಹೋಗಬಾರದು, ಬೇರೆ ರಾಜ್ಯಗಳಿಗೆ ಪ್ರಯಾಣ ಮಾಡಬಾರದು ಎಂದು ತಿಳಿಸಿದರು. ಸಾರ್ವಜನಿಕರು ಕಡ್ಡಾಯವಾಗಿ ಎರಡು ಡೋಸ್ ಲಸಿಕೆ ಪಡೆಯಬೇಕು.
- ವಾರ್ಡ್ ನಂ 06(ಥಣಿಸಂದ್ರ)ದಲ್ಲಿ ಇಲ್ಲಿಯವರೆಗೆ ಕೋವಿಡ್ ಲಸಿಕೆ ಮೋದಲನೇಯ ಡೋಸ್ ಶೇ 104 ಹಾಗೂ ಎರಡನೇಯ ಡೋಸ್ ಶೇ 88 ರಷ್ಟು ಜನ ಪಡೆದಿದ್ದರೆ ಎಂದು ಡಾ॥ ಅಲೀನಾ ಆರೋಗ್ಯ ವ್ಯಧ್ಯಾಧಿಕಾರಿಗಳು, ಹೆಗಡೆನಗರ ಪ್ರಾಥಮಿಕ ಆರೋಗ್ಯ ಕೇಂದ್ರರವರು ಸಬೇಗೆ ತಿಳಿಸಿದರು. ಸಾರ್ವಜನಿಕರು ಮಾತನಾಡಿ ವಾರ್ಡ್ ನಂ 06(ಥಣಿಸಂದ್ರ)ದಲ್ಲಿ ಲಸಿಕೆ ಕಾರ್ಯಕ್ರಮದಲ್ಲಿ ಹೆಚ್ಚಿನ ಪ್ರಗತಿ ಸಾಧೀಸಿರುವುದರಿಂದ ಲಸಿಕೆ ಕಾರ್ಯಕ್ರಮಕ್ಕೆ ಸಕ್ರೀಯವಾಗಿ ಕಾರ್ಯನಿರ್ವಹಿಸಿರುವ ಎಲ್ಲ ಆರೋಗ್ಯ ಕಾರ್ಯಕರ್ತರಿಗೆ ಹಾಗೂ ಬಿ.ಬಿ.ಎಂ.ಪಿ. ಇಂಜಿನಿಯರಿಂಗ್ ಮತ್ತು ರೆವೆನ್ಯೂ ಶಾಖೆಯ ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ಸಲ್ಲಿಸಿದರು.

2. **ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ**

- ಶ್ರೀಮತಿ ಚಿತ್ರಾ ಜಯರಾಮ ಸ.ಕಾ.ಅ (ಘನತ್ಯಾಜ್ಯ) ಬ್ಯಾಟರಾಯನಪುರ ರವರು ಮಾತನಾಡಿ ವಾರ್ಡ್ ನಂ 06(ಥಣಿಸಂದ್ರ)ದಲ್ಲಿ ಮನೆ ಮನೆಗಳಿಂದ ಘನತ್ಯಾಜ್ಯ ಸಂಗ್ರಹಣೆ ಮಾಡಲು 30 ಆಟೋಟಿಪ್ಪರಗಳು ನೀಡಿದ್ದು, ಅದರಂತೆ ಕಾರ್ಯನಿರ್ವಹಿಸಲಾಗುತ್ತಿರುತ್ತದೆ. ಆದರೆ ಘನತ್ಯಾಜ್ಯ ಮೈಕ್ರೋ ಪ್ಲಾನ್ ಅನ್ವಯ ಮನೆ ಮನೆಗಳಿಂದ ಘನತ್ಯಾಜ್ಯ ಸಂಗ್ರಹಣೆ ಮಾಡಲು ಪ್ರತಿ 750 ಮನೆಗಳಿಗೆ ಒಂದು ಆಟೋಟಿಪ್ಪರ ಅವಶ್ಯಕವಾಗಿದ್ದು, ವಾರ್ಡ್ ನಂ 06(ಥಣಿಸಂದ್ರ)ರಲ್ಲಿ ವಿರುವ ಒಟ್ಟು 40000 ಮನೆಗಳಿಗೆ 50 ಆಟೋ ಟಿಪ್ಪರ ಹಾಗೂ ಒಂದು ಹೆಚ್ಚುವರಿಯಾಗಿ ಕಾಂಪ್ಯಾಕ್ಟರ್ ಅವಶ್ಯಕವಾಗಿದ್ದು, ಮೈಕ್ರೋ ಪ್ಲಾನ್ ಅನ್ವಯ ಕನಿಷ್ಟ 10 ಆಟೋಟಿಪ್ಪರಗಳು ಮತ್ತು ಒಂದು ಕಾಂಪ್ಯಾಕ್ಟರ್ ನೀಡಿದಲ್ಲಿ ಸಮರ್ಪಕವಾಗಿ ಘನತ್ಯಾಜ್ಯ ಸಂಗ್ರಹಣೆ ಮತು ವಿಲೇವಾರಿ ಕಾರ್ಯ ಮಾಡಬಹುದಾಗಿರುತ್ತದೆ ಎಂದು ತಿಳಿಸಿದರು ಸ.ಕಾ.ಅ ರವರು ಸಭೆಯಲ್ಲಿ ತಿಳಿಸಿದರು. ಈ ವಿಷಯದ ಬಗ್ಗೆ ಸುರ್ದೀರ್ಘವಾಗಿ ಚರ್ಚಿಸಲಾಗಿ ಸ.ಕಾ.ಅ ರವರು ಸಭೆಯಲ್ಲಿ ವಿವರಿಸಿರುವಂತೆ ವಾರ್ಡ್ ನಂ 06 (ಥಣಿಸಂದ್ರ) ಕ್ಕೆ ಘನತ್ಯಾಜ್ಯ ಮೈಕ್ರೋ ಪ್ಲಾನ್ ಅನ್ವಯ ಕನಿಷ್ಟ 10 ಆಟೋಟಿಪ್ಪರಗಳು ಮತ್ತು ಒಂದು ಕಾಂಪ್ಯಾಕ್ಟರ್ ಹೆಚ್ಚುವರಿಯಾಗಿ ಅವಶ್ಯಕತೆಗೆ ಅನುಗುಣವಾಗಿ ನೀಡಲು ಮಾನ್ಯ ಜಂಟಿ ಆಯುಕ್ತರು (ಘನತ್ಯಾಜ್ಯ) ರವರಿಗೆ ಕೋರಲು ಸಮಿತಿಯಲ್ಲಿ ತಿರ್ಮಾನಿಲಾಯಿತು.

3. **ಕುಡಿಯುವ ನೀರು ಸರಬರಾಜು ಮತ್ತು ನಿರ್ವಹಣೆ ಬಗ್ಗೆ :**

- ಶ್ರೀ ಸುರೇಶ ದೇವತರಾಜ್ ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಮಾನ್ಯ ನೋಡಲ ಅಧಿಕಾರಿಗಳು ರವರು ಸೂಚಿಸಿರುವಂತೆ ವಾರ್ಡ್ ನಂ 06( ಥಣಿಸಂದ್ರ) ವ್ಯಾಪ್ತಿಯಲ್ಲಿ ಚಾಲ್ತಿಯಲ್ಲಿರುವ ವಿರುವ ಕುಡಿಯುವ ನೀರಿನ ಕೊಳವೆಬಾವಿಗಳ ಸರ್ವೆ ಕಾರ್ಯ ಕೈಗೊಂಡು ಪಟ್ಟಿಮಾಡಲಾಗಿದ್ದು, ಅದರಂತೆ ಒಟ್ಟು 145 ಕೊಳವೆ ಬಾವಿಗಳು ಚಾಲ್ತಿಯಲ್ಲಿದ್ದು, ಈ ಕೊಳವೆಬಾವಿಗಳಿಗೆ ಪ್ರತ್ಯೇಕವಾಗಿ ನಂಬರಗಳನ್ನು ನೀಡಿ ಒಂದು ಸ್ಟಿಕರ್ ಅಳವಡಿಸಿ ಕೊಳವೆಬಾವಿ ಕ್ರಮ ಸಂಖ್ಯೆ ಮತ್ತು ಆರ್.ಆರ್. ಸಂಖ್ಯೆಗಳನ್ನು ಬರೆಯಲಾಗುತ್ತಿದ್ದು ಮಂದಿನ ಸಭೆವರೆಗೆ ಈ ಕಾರ್ಯ ಪೂರ್ಣಗೊಳಿಸಲಾಗುವುದೆಂದು ಸಬೆಗೆ ತಿಳಿಸಿದರು.
- ಶ್ರೀ ಚಂದನ ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಮಾತನಾಡಿ ಹೆಗಡೆನಗರ ಪೂರ್ವಭಾಗದಲ್ಲಿ ಒಳಚರಂಡಿಯ ಪೈಪು ಅಳವಡಿಸುವುದು, ಮ್ಯಾನಹೋಲ್‌ಗಳ ನಿರ್ಮಾಣ ಮತ್ತು ರೀಸಿವರ್ ಚೇಂಬರ್ ಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ ಎಂದು ಸಭೆಗೆ ತಿಳಿಸಿದರು.
- ಸಾರ್ವಜನಿಕರು ಮಾತನಾಡಿ ರಸ್ತೆಗಳಲ್ಲಿ ವಿರುವ ಹೆಚ್ಚುವರಿ ಮಣ್ಣು ತೆಗೆದು ಸಾರ್ವಜನಿಕರಿಗೆ ಮತ್ತು ವಾಹನಗಳು ಓಡಾಡಲು ಅನುಕುಲವಾಗುವಂತೆ ಕ್ರಮವಹಿಸಲು ಕೊರಿದರು.
- ಅಂಜನಾದ್ರಿ ಬಡಾವಣೆಯಲ್ಲಿ ಕುಡಿಯುವ ನಿರಿನ ಅಭಾವವಿರುವ ಕಾರನ ಒಂದು ಹೋಸದಾಗಿ ಕೊಳವೆ ಬಾವಿ ಕೊರೆದು ನೀರು ಸರಬರಾಜು ಮಾಡಲು ಕ್ರಮ ವಹಿಸಬೇಕಾಗಿ ಕೋರಿದರು.

- ಅಂಜನಾದ್ರೀ ಹೆಗಡೆನಗರ ಪೂರ್ವಭಾಗ ಮತ್ತು ಪಶ್ಚಿಮ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸಾರ್ವಜನಿಕರು ತಿಳಿಸದರು. ಈ ಸಂಬಂದ ವಾರ್ಡ್ ಅಭಿಯಂತರರು ಮಾತನಾಡಿ ಹೆಗಡೆನಗರ ಪೂರ್ವ ಭಾಗ 4ನೇ ಅಡ್ಡರಸ್ತೆ ಮತ್ತು ಪಶ್ಚಿಮ ಭಾಗ 2ನೇ ಅಡ್ಡರಸ್ತೆಯಲ್ಲಿ ಹೊಸದಾಗಿ ಕೊಳವೆಬಾವಿ ಕೋರಯಲಾಗುವುದೆಂದು ಸಭೆಗೆ ತಿಳಿಸಿದರು.
- ಹೆಗಡೆನಗರದ ಪೂರ್ವಭಾಗದಲ್ಲಿ ಕೆನೆರಾ ಬ್ಯಾಂಕ ಹತ್ತಿರವಿರುವ ಕೊಳವೆಬಾವಿಯನ್ನು ಸಾರ್ವನಿಕರ ದೂರಿನ ಅನ್ವಯ ಬಿ.ಬಿ.ಎಂ.ಪಿ ವತಿಯಿಂದ ನಿಲ್ಲಿಸಲಾಗಿದ್ದು, ಈ ಕೊಳವೆಬಾವಿಯಲ್ಲಿ ನೀರನ ಪ್ರಮಾಣ ಕಡಿಮೆವಿರುವ ಕಾರಣ ಸುಮಾರು 7-8 ಮನೆಗಳಿಗೆ ನೀರು ಸರಬರಾಜವಾಗುತ್ತಿದ್ದು, ಬಿ.ಬಿ.ಎಂ.ಪಿ ವತಿಯಿಂದ ನಿಲ್ಲಿಸಲಾಗಿರುವದರಿಂದ ಕೊಳವೆಬಾವಿ ಅಕ್ಕ ಪಕ್ಕದ ಮನೆಗಳಿಗೆ ತೊಂದರೆಯಾಗುತ್ತಿರುದಾಗಿ ತಿಳಿಸಿದರು. ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡಿ ಕೊಳವೆಬಾವಿ ಸ್ಥಗಿತಗೊಳಿಸಿರುವುದನ್ನು ಪುನ: ಪ್ರಾರಂಭಿಸಲು ಮತ್ತು ಕಡ್ಡಾಯವಾಗಿ ವಾರಟಮೆನ್ ಮಾತ್ರ ನಿರ್ವಹಣೆ ಮಾಡಬೇಕಾಗಿ ಸೂಚಿಸಿದರು.

4. **ವಾರ್ಡ್ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ :**

- ನಾರಾಯಣಪುರ ಕ್ರಾಸ್ ಹತ್ತಿರವಿರುವ ಫ್ಲೈಓವರ ಎರಡು ಬದಿಯ ಸರ್ವಿಸ್ ರಸ್ತೆಗಳು ತುಂಬ ಹಾಳಾಗಿದ್ದು, ಸಂಬಂದಪಟ್ಟ ಇಲಾಖೆಯವರು ಕೂಡಲೇ ರಸ್ತೆಗೆ ಡಾಂಬರೀಕರಣ ಮಾಡಬೇಕಾಗಿ ಕೋರಿದರು. ಸದರಿ ವಷಯದ ಬಗ್ಗೆ ಸ.ಕಾ.ಅ ರಸ್ತೆ ಮೂಲ ಭೂತಸೌಕರ್ಯ ರವರು ಮಾತನಾಡಿ ಸರ್ವಿಸ್ ರಸ್ತೆಯಲ್ಲಿ ಜೈಕಾ ರವರು ಪೈಪುಗಳನ್ನು ಅಳವಡಿಸುವ ಕಾರ್ಯ ಬಾಕಿವಿರುವ ಕಾರಣ ರಸ್ತೆಗೆ ಡಾಂಬರೀಕರಣ ಮಾಡುವ ಕೆಲಸ ಬಾಕಿವಿರುತ್ತದೆ ಎಂದು ಸಭೆಗೆ ತಿಳಿಸಿದರು.
- ವಾರ್ಡ್ ಅಭಿಯಂತರರು ಮಾತನಾಡಿ ದಾಸರಹಳ್ಳಿ ಗ್ರಾಮದ ಕಾವೇರಿ ಬಡಾವಣೆ, ಡಿಫೇನ್ಸ್ ಲೇಔಟ್ ಶೋಭಾ ಅಪಾರ್ಟಮೆಂಟ್ ಪಕ್ಕದ ರಸ್ತೆಗಳ ಅಭಿವೃದ್ಧಿ ಕಾರ್ಯ ಪ್ರಾರಂಭಿಸಲಾಗಿದೆ ಎಂದು ಹಾಗೂ ಥಣಿಸಂದ್ರ ಗ್ರಾಮದ ವಿವಿಧ ಪ್ರದೇಶಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಕಾವೇರಿ ನೀರನ ಟೇಸ್ಟಿಂಗ್ ಕಾರ್ಯಬಾಕಿವಿದ್ದು, ಟೇಸ್ಟಿಂಗ್ ಕಾರ್ಯ ಪೂರ್ಣಗೊಂಡನಂತರ ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗುವುದಂದು ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗಳ ಗುಂಡಿ ಮುಚ್ಚುವ ಕಾರ್ಯ ಪ್ರಗತಿಯಲ್ಲಿದ್ದು, ಈಗಾಗಲೇ ಭೂವನೇಶ್ವರಿನಗರ ಪಾರ್ಕ ರಸ್ತೆ, 20ನೇ ಆರ್. ಅಡ್ಡರಸ್ತೆ, ಆಕಾಶವಾಣಿ ಬಡಾವಣೆಯ ಅಡ್ಡ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚಲಾಗುತ್ತಿದೆ ಎಂದು ತಿಳಿಸಿದರು. ಶ್ರೀ ರಾಘವೇಂದ್ರ ಎಮ್.ಎಸ್. ರಾಮಯ್ಯ ಬಡಾವಣೆಯ ಆಧ್ಯಕ್ಷರು ಮಾತನಾಡಿ ಎಮ್.ಎಸ್. ರಾಮಯ್ಯ ಬಡಾವಣೆಯಲ್ಲಿರುವ ಗುಂಡಿಗಳನ್ನು ಮುಚ್ಚಲು ಕೋರಿದರು.

5. **ವಿದ್ಯೂತ್ ದೀಪಗಳ ನಿರ್ವಹಣೆ ಬಗ್ಗೆ**

- ರೈಲ್ವೆ ಸಮನಾಂತರ ರಸ್ತೆಯಲ್ಲಿ ವಿದ್ಯೂತ್ ದೀಪಗಳು ಇಲ್ಲದೇ ಇರುವುದರಿಂದ ರಾತ್ರಿವೇಳೆಯಲ್ಲಿ ಸಾರ್ವಜನಿಕರಿಗೆ ಒಡಾಡಲು ತೊಂದರೆಯಾಗುತ್ತಿರುವುದಾಗಿ ಸಭೆಗೆ ಸಾರ್ವಜನಕರು ತಿಳಿಸಿದರು.

6. **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.**

- ಶ್ರೀನಿವಾಸರಾವ ರವರು ಮಾತನಾಡ ಎಲೀಮೆಂಟ್ಸ್ ಮಾಲ್ ಹತ್ತಿರ ವಿರುವ ಮಳೆನೀರು ಚರಂಡಿಯಲ್ಲಿ ವಿರುವ ಹೂಳು ತೆಗೆಯಲು ಸಂಬಂದಪಟ್ಟ ಬೃಹತ್ ನೀರುಗಾಲುವೆಯ ವಿಭಾಗದ ಅಭಿಯಂತರಿಗೆ ತಿಳಿಸಬೇಕಾಗಿ ಕೋರಿದರು.
- ಹೆಗಡೆನಗರ ವೃತ್ತದ ಹತ್ತಿರ ಸಾರ್ವಜನಿಕ ಶೌಚಾಲಯ ಅವಶ್ಯಕವಾಗಿದ್ದು, ಚಿಕ್ಕಜಾಲ ಪೋಲೀಸ್ ಸ್ಟೇಷನ್ ಮುಂಭಾಗವಿರುವ ಜಾಗದಲ್ಲಿ ಅಥವಾ ನಾರಾಯಣಪುರ ಕ್ರಾಸ್ ಫ್ಲೈಓವರ ಕೆಳಗಡೆ ನಿರ್ಮಿಸಬಹುದಾಗಿದ್ದು
ಎಂದು ಸಾರ್ವಜನಿಕರು ಸಭೆಯಲ್ಲಿ ಕೋರಿದರು.

- ಹೆಗಡೆನಗರ ವೃತ್ತದ ಹತ್ತಿರ ವಾಹನಗಳ ಪಾರ್ಕಿಂಗ್ ಸಮಸ್ಯೆವಿದ್ದು, ಟ್ರಾಫೀಕ್ ಪೋಲಿಸ್ ರವರು ಅಗತ್ಯಕ್ರಮ ವಹಿಸಬೇಕಾಗಿ ಕೋರಿದರು.
- ನೋಡಲ್ ಅಧಿಕಾರಿಗಳು ಮಾತನಾಡಿ ಕುಡಿಯುವ ನೀರು ಸರಬರಾಜುಗೆ ಸಂಬಂದಿಸಿದಂತೆ ಬಹಳಷ್ಟು ದೂರುಗಳು ಬರುತ್ತಿದ್ದು, ಎಲ್ಲಾ ವಾಟರಮೆನ್‌ಗಳು ಕುಡಿಯುವ ನೀರನ ಸರಬರಾಜು ಬಗ್ಗೆ ಸಮರ್ಪಕವಾಗಿ ಕೆಲಸ ನಿರ್ವಹಸಲು ಸೂಚಿಸಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು, ವಾರ್ಡ್ ಸಮಿತಿರವರು ಮಾತನಾಡಿ ಈವರೆಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರೀಗಣಿಸಿ ಎಲ್ಲಾ ದೂರು ಮತ್ತು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಗತ್ಯಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳಿಗೆ ಹಾಗೂ ವಿವಿಧ ಬಡಾವಣೆಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಹಾಜರಾಗಿರುವ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

24/12/2024

**ಕಾರ್ಯದರ್ಶಿ**
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 06, (ಥಣಿಸಂದ್ರ)

**ನೋಡಲ್ ಅಧಿಕಾರಿಗಳು**
ವಾರ್ಡ್ ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)
ಹಾಗೂ ಸ.ಕಾ.ಅ ಬ್ಯಾಟರಾಯನುರ ಉಪ ವಿಭಾಗ

**ಪ್ರತಿಯನ್ನು.**

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂಧ್ರ ಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಯಲಹಂಕ ವಲಯ ರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು, ಯಲಹಂಕ ವಲಯ ರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.